(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದರು)

1. ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅನುಮತಿ ಕೋರಿ ಚರ್ಚೆ:

ವಿಷಯ:– ಸನ್ಮಾನ್ಯ ಲೋಕಾಯುಕ್ತರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಬಗ್ಗೆ.

(ಮುಂದಲ)

ಶ್ರೀ ಸಿದ್ದರಾಮಯ್ಯ: ನಾನು ಮಾತನಾಡುತ್ತೇನೆ. ಆಮೇಲೆ ನೀವು ಮಾತನಾಡಿ.

ಅಧ್ಯಕ್ಷರು: Please ಕುಳಿತುಕೊಳ್ಳಿ. ಈಗ ಪ್ರಶ್ನೋತ್ತರ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಲೋಕಾಯುಕ್ತ ನ್ಯಾಯಾಧೀಶರಾದಂತಹ ಮಾನ್ಯ ಸಂತೋಷ್ ಹೆಗ್ಡೆಯವರು ರಾಜೀನಾಮೆ ಕೊಟ್ಟಿರುವಂತಹದ್ದು ಇಡೀ ದೇಶದ, ಈ ರಾಜ್ಯದ ಜನರ ಮನಸ್ಸು ಇವತ್ತು ಈ ಕಡೆ ಸೆಳೆದಿದೆ.

ಇದು ಒಂದು ಅತ್ಯಂತ ತೀವ್ರವಾದಂತಹ, ಗಂಭೀರವಾದಂತಹ ವಿಷಯವೆಂದು ಇವತ್ತು ಚರ್ಚೆ ನಡೆಯುತ್ತಿದೆ. ಬಹುಶಃ ಮಾನ್ಯ ಸಂತೋಷ ಹೆಗ್ಡೆರವರು ರಾಜೀನಾಮೆ ಕೊಟ್ಟ ಮೇಲೆ ಇಷ್ಟೊಂದು ರೀತಿಯಲ್ಲಿ ಸಾರ್ವಜನಿಕ ಅಭಿಪ್ರಾಯ ವ್ಯಕ್ತವಾಗಿರುವಂಥದ್ದು ನನಗೆ ಗೊತ್ತಿರುವ ಮಟ್ಟಿಗೆ ಯಾವುದೇ ನಿದರ್ಶನ ಇಲ್ಲವೆಂದು ಅನಿಸುತ್ತದೆ ಮತ್ತು ಇಡೀ ದೇಶದಲ್ಲಿ ಯಾವ ರಾಜ್ಯಗಳಲ್ಲಿಯೂ ಕೂಡ ಲೋಕಾಯುಕ್ತರು ರಾಜೀನಾಮೆ ಕೊಟ್ಟಿರತಕ್ಕಂಥ ನಿದರ್ಶನ ಇಲ್ಲ ಅದರಲ್ಲಿಯೂ ಸರ್ಕಾರದ ಸಹಕಾರ ಇಲ್ಲ. ಭ್ರಷ್ಟಾಚಾರ ತೆಗೆದು ಹಾಕಲಿಕ್ಕೆ ಯುದ್ಧ ಸಾರಿದ್ದೆವು. ಅನೇಕ ಜನ ಭ್ರಷ್ಟ ಅಧಿಕಾರಿಗಳನ್ನು ದಾಳಿ ಮಾಡಿ ಅವರ ಮೇಲೆ ಮೊಕದ್ದಮೆಗಳನ್ನು ಹಾಕಿ, ಅವರುಗಳ ಮೇಲೆ Criminal Charges ಮಾಡಿ ಅವರನ್ನು Suspend ಮಾಡತಕ್ಕಂಥ ಅನೇಕ ವರದಿಗಳನ್ನು ಕೊಟ್ಟಿದ್ದೇವೆ. ಬಹುಶ: ಇವರು ಬಂದ ಮೇಲೆ ಇವತ್ತು ನಿಮಗೆಲ್ಲಾ ಗೊತ್ತಿದೆ, ಕುಮಾರಿ ಸಂಜನಾ ರೆಡ್ಡಿಯವರ ಮೇಲೆ Compound ಬಿದ್ದು

ಅವರು ಸತ್ತು ಹೋದರು. ಅವರು ನಿಮ್ಮಲ್ಲಿ ಮಾತ್ರ ನಮಗೆ ವಿಶ್ವಾಸ ಇದೆ, ನಂಬಿಕೆ ಇದೆ, ಬೇರೆ ಯಾವ ತನಿಖೆಯ ಮೇಲೂ ವಿಶ್ವಾಸ ಇಲ್ಲವೆಂದು ಹೇಳಿ ಸಂಜನಾ ರೆಡ್ಡಿಯವರ ತಂದೆ-ತಾಯಿಗಳು ಲೋಕಾಯುಕ್ತರ ಹತ್ತಿರ ಹೋಗಿ ಮನವಿಯನ್ನು ಮಾಡಿಕೊಳ್ಳುತ್ತಾರೆ. ಈ ತರಹ ಅನೇಕ ಸಾರ್ವಜನಿಕರು ಲೋಕಾಯುಕ್ತರ ಬಳಿ ತಮ್ಮ ಅಳಲನ್ನು ತೋಡಿಕೊಳ್ಳಲು ಅವರಿಗೆ ಆಗಿರುವ ಅನ್ಯಾಯಗಳಿಗೆ ನ್ಯಾಯ ಬೇಡಿ ಹೋಗಿರತಕ್ಕಂಥ ಅನೇಕ ನಿದರ್ಶನಗಳನ್ನು, ಘಟನೆಗಳನ್ನು ನಾವು ನೋಡುತ್ತೇವೆ. ಇದಕ್ಕೆ ಕಾರಣವೇನೆಂದರೆ ಮಾನ್ಯ ಅಧ್ಯಕ್ಷರೆ, ಇವರ ಮೇಲೆ ಇವತ್ತು ಸಾರ್ವಜನಿಕರಲ್ಲಿರುವ ನಂಬಿಕೆ. Here is an institution...

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಚರ್ಚೆ ಮಾಡಲು ನಮ್ಮದೇನೂ ತಕರಾರು ಇಲ್ಲ. ಮಾಡಲಿ.

ಶ್ರೀ ಸಿದ್ದರಾಮಯ್ಯ: ಈ ರೀತಿ ಮಧ್ಯೆ ಮಧ್ಯೆ ಎದ್ದು ನಿಂತುಕೊಂಡರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್: ನಾನು ಮಧ್ಯೆ ಮಧ್ಯೆ ಏಳುತ್ತಿಲ್ಲ. ತಮಗೆ request ಮಾಡುತ್ತಿದ್ದೇನೆ ಅಷ್ಟೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ತಾವು ನನಗೆ ಮಾತನಾಡಲು allow ಮಾಡಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್: ನಾನು ತಮ್ಮಲ್ಲಿ ಮಾಡುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ: ತಾವು ಮಧ್ಯೆ ಮಧ್ಯೆ ಏಕೆ ನಿಂತುಕೊಳ್ಳುತ್ತೀರಿ? I can't understand.

ಶ್ರೀ ಜಗದೀಶ್ ಶೆಟ್ಟರ್: ಇವರದು ಯಾವ ರೀತಿಯ ambition?

ಶ್ರೀ ಸಿದ್ದರಾಮಯ್ಯ: ನನ್ನ ಮಾತು ಮುಗಿದ ಮೇಲೆ ಬೇಕಾದರೆ ಅವರು ಹೇಳಲಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ರೂಲ್ 69ರ ಮೇಲೆ ಚರ್ಚೆ ಮಾಡಿ ಎಂದು ತಾವು ರೂಲಿಂಗ್ ಕೊಟ್ಟಿದ್ದೀರಿ ರೂಲ್ 69ರಡಿಯಲ್ಲಿ ಬೇಕಾದರೆ ಚರ್ಚೆ ಮಾಡಲಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಶೆಟ್ಟರ್‌ರವರೆ, ನಾವು ಚರ್ಚೆ ಮಾಡುತ್ತೇವೆ. ನೀವು ಕೂಳಿತುಕೊಳ್ಳಿ. You can't restrict me.

ಶ್ರೀ ಜಗದೀಶ್ ಶೆಟ್ಟರ್: ನಿನ್ನೆ ಮೊನ್ನೆಯೂ ಮಾತನಾಡಿದ್ದೀರಿ, ಮತ್ತೇ ಪದೇ ಪದೇ ಅದೇ ಮಾತನಾಡಿದರೆ ಹೇಗೆ? ನಾನು restriction ಮಾಡುತ್ತಿಲ್ಲ. ನೀವು ಮಾತನಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಬಿಡುತ್ತಿಲ್ಲವಲ್ಲಾ ಏನಿದು?

ಅಧ್ಯಕ್ಷರು: ಮಾನ್ಯ ಸಿದ್ದರಾಮಯ್ಯನವರೆ ನೀವು ಚರ್ಚೆಯನ್ನು ಪ್ರಾರಂಭ ಮಾಡುವುದಾದರೆ ಈಗಲೇ ಮಾಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಳಕ್ಕೆ ಹೋಗಲಿ, ಆಮೇಲೆ ಚರ್ಚೆ ಮಾಡೋಣ. ಕೆಲವು ಮಾನ್ಯ ಸದಸ್ಯರು wellನೊಳಗೆ ಇರುತ್ತಾರೆ. ವಿರೋಧಪಕ್ಷದ ನಾಯಕರು ಚರ್ಚೆ ಮಡುತ್ತೀರಿ ಇದಕ್ಕೇನಾದರೂ ಅರ್ಥವಿದೆಯೇ? ಚರ್ಚೆ ಮಾಡುವುದಾದರೆ ಮಾಡಿ.

ಅಧ್ಯಕ್ಷರು: ಈಗ ಪ್ರಶ್ನ ಏನೆಂದರೆ, ಚರ್ಚೆಯನ್ನೇ ಪ್ರಾರಂಭ ಮಾಡುವುದಾದರೆ ಮಾಡಿ.

ಶ್ರೀ ಜಗದೀಶ್ ಶೆಟ್ಟರ್: ಒಂದು ವಾರವಾದರೂ ಚರ್ಚೆ ಮಾಡಿ ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, what has happen ಎನ್ನುವುದನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು: ಕೆಲವು ಮಾನ್ಯ ಸದಸ್ಯರು well ನಲ್ಲಿ ಇರುವುದು, ತಾವು ಮಾತನಾಡುವುದು.

ಶ್ರೀ ಸಿದ್ದರಾಮಯ್ಯ: ನಾನು ಹೊರಗಡೆ ನಿಂತು ಮಾತನಾಡುತ್ತಿದ್ದೇನೆ.

ಅಧ್ಯಕ್ಷರು: ತಾವು ಮಾತನಾಡುತ್ತಿದ್ದೀರಿ. ಕೆಲವು ಮಾನ್ಯ ಸದಸ್ಯರು well ನಲ್ಲಿದ್ದಾರೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಅದನ್ನು ತಾವು ತೀರ್ಮಾನ ಮಾಡಿ.

ಶ್ರೀ ಸಿದ್ದುಸವದಿ: ಮಾನ್ಯ ಅಧ್ಯಕ್ಷರೆ, ಅಜೆಂಡಾ ಪ್ರಕಾರ ಮೊದಲು ಪ್ರಶ್ನೋತ್ತರ ತೆಗೆದುಕೊಂಡು ಆನಂತರ ವಿಷಯದ ಮೇಲೆ ಚರ್ಚೆ ಮಾಡಲು ಅವಕಾಶ ಕೊಡಿ.

ಅಧ್ಯಕ್ಷರು: ಚರ್ಚೆ ಯಾವುದರ ಮೇಲೆ ಎಂದು ಹೇಳಿ.

ಶ್ರೀ ಸಿದ್ದರಾಮಯ್ಯ: ನಾನು yield ಆಗಿಲ್ಲ.

ಶ್ರೀ ಸಿದ್ದುಸವದಿ: ಮಾನ್ಯ ಅಧ್ಯಕ್ಷರೆ, ಅಜೆಂಡಾ ಪ್ರಕಾರ ಪ್ರಶ್ನೋತ್ತರ ತೆಗೆದುಕೊಳ್ಳಿ.

ಶ್ರೀ ಸಿದ್ದರಾಮಯ್ಯ: ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ನಾನು ಮಾತನಾಡಿದ ಮೇಲೆ ಬೇಕಾದರೆ ಅವರು ಮಾತನಾಡಲಿ ಎಂದು ಅವರಿಗೆ ಹೇಳಿ.

ಶ್ರೀ ಬಿ ಎನ್ ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ರೂಲ್ 69ರಡಿಯಲ್ಲಿ ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದೀರಿ. ಇದೇ ರೀತಿ ಎರಡು ದಿನಗಳಿಂದಲೂ ಸದನದ ಕಾರ್ಯಕಲಾಪಗಳನ್ನು ಹಾಳು ಮಾಡಿದ್ದಾರೆ. ಮತ್ತೆ ಅದನ್ನೇ ಮಾತನಾಡಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ: ಹಾಳು ಮಾಡಿರುವವರು ನೀವು.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿದ್ದುಸವದಿ: ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಚರ್ಚೆ ಮಾಡಬೇಕಾದರೆ ರೂಲ್ 69ರ ಅಡಿಯಲ್ಲಿ ಚರ್ಚೆ ಮಾಡಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸಿದ್ದುಸವದಿಯವರೆ, ಬಚ್ಚೇಗೌಡರೆ ದಯವಿಟ್ಟು ಕುಳಿತುಕೊಳ್ಳಿ. ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಒಂದು ನಿಮಿಷ ಕುಳಿತುಕೊಳ್ಳಿ. ತಾವು detail ಆಗಿ ಚರ್ಚೆ ಮಾಡುವುದಾದರೆ ಪ್ರಶ್ನೋತ್ತರದ ನಂತರ ಮಾಡಿ.

ಶ್ರೀ ಸಿದ್ದರಾಮಯ್ಯ: ನಾನು ಮಾತನಾಡಿದ ನಂತರ ತಾವು ಏನು ತೀರ್ಮಾನ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ.

ಅಧ್ಯಕ್ಷರು:: ಹಾಗಲ್ಲ. ಇದು nothing but ಚರ್ಚೆಯಾಗುತ್ತದೆ.

(ಗೊಂದಲ)

SRI SIDDARAMAIAH:- You have allowed me to make a submission.

ಅಧ್ಯಕ್ಷರ: ಆಯಿತು ಎರಡು ನಿಮಿಷದಲ್ಲಿ ಮುಗಿಸಿ.

ಶ್ರೀ ಬಿ ಎನ್ ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಪ್ರತಿಪಕ್ಷದ ನಾಯಕರು.

ಅಧ್ಯಕ್ಷರು: ಮಾನ್ಯ ಬಚ್ಚೇಗೌಡರೆ ಕುಳಿತುಕೊಳ್ಳಿ.

ಶ್ರೀ ಎಂ ಪಿ ರೇಣುಕಾಚಾರ್ಯ: ಮಾನ್ಯ ಅಧ್ಯಕ್ಷರೆ, ಹೊಸದಾಗಿ ಮಾನ್ಯ ಸದಸ್ಯರುಗಳು ಆಯ್ಕೆಯಾಗಿದ್ದಾರೆ ದಯವಿಟ್ಟು ಅವರಿಗೊ ಚರ್ಚೆಗೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ರೇಣುಕಾಚಾರ್ಯರೆ ಕುಳಿತುಕೊಳ್ಳಿ.

ಶ್ರೀ ಎಂ ಪಿ ರೇಣುಕಾಚಾರ್ಯ: ಪ್ರತಿಪಕ್ಷದ ನಾಯಕರಲ್ಲಿ ವಿನಂತಿ ಮಾಡುತ್ತೇನೆ, ತಾವು ಈ ರೀತಿ ಸಮಯವನ್ನು ಹರಣ ಮಾಡಬೇಡಿ. ಜನರು ಛೀಮಾರಿ ಹಾಕುತ್ತಾರೆ ಅರ್ಥ ಮಾಡಿಕೊಳ್ಳಿ.

ಅಧ್ಯಕ್ಷರು: ಆಯಿತು, ಮಾನ್ಯ ರೇಣುಕಾಚಾರ್ಯರೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನಮಗೂ ಕೂಡ ಗಲಾಟೆ ಮಾಡಲು ಬರುತ್ತದೆ. ಆಮೇಲೆ ನಾವೂ ಅವರ್ಯಾರು ಮಾತನಾಡುವುದಕ್ಕೆ ಬಿಡುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸಿದ್ದುಸವದಿಯವರೆ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾವು ನಿಯಮ 60ರಡಿಯಲ್ಲಿ ಏಕೆ move ಮಾಡಿದೆವು ಅಂದರೆ, ಇದು ಬಹಳ ತೀವ್ರವಾದಂತಹ ಇಡೀ ರಾಜ್ಯದ, ದೇಶದ ಗಮನವನ್ನು ಸೆಳೆದಿರತಕ್ಕಂಥ ವಿಚಾರ. ಇವತ್ತು ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತಿದ್ದಂಥವರಿಗೆ ಈ ಸರ್ಕಾರದಲ್ಲಿ ಅಸಹಕಾರ ಸಿಕ್ಕಿದೆ. ಭ್ರಷ್ಟಚಾರಕ್ಕೆ ಕುಮ್ಮಕ್ಕು ಕೊಡುತ್ತಿದ್ದಾರೆ. ಭ್ರಷ್ಟ ಅಧಿಕಾರಿಗಳನ್ನು ರಕ್ಷಣೆ ಮಾಡುತ್ತಿದ್ದಾರೆ. ಇವತ್ತು ಕಣ್ಣಿಗೆ ಕಂಡಂತೆ ಅವರೇ ಒಪ್ಪಿಕೊಂಡಿರುವ ಪ್ರಕಾರ 35 ಲಕ್ಷ ಮೆಟ್ರಿಕ್ ಟನ್ ಕಬ್ಬಿಣದ ಅದಿರು ಕಳ್ಳ ದಾರಿಯಲ್ಲಿ ಸಾಗಾಣಿಕೆ ಆಗಿದೆ. ಅದರ ಹಿಂದೆ ಸರ್ಕಾರದಲ್ಲಿರತಕ್ಕಂಥವರೇ ಇದ್ದಾರೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಕುಮ್ಮಕ್ಕು ಇದೆ.

ಶ್ರೀ ಬಿ ಎನ್ ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನೇರವಾಗಿ ಆಪಾದನೆ ಮಾಡುತ್ತಿದ್ದಾರೆ. ಚರ್ಚೆಯೇ ಇನ್ನೂ ಪ್ರಾರಂಭವಾಗಿಲ್ಲ. ಕೇವಲ ಆಪಾದನೆಗಳನ್ನು ಮಾಡುತ್ತಿದ್ದಾರೆ. ಇದು hit and run case.

ಶ್ರೀ ಬಿ ಎನ್ ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಚರ್ಚೆ ಮಾಡುವುದಕ್ಕೆ ಹೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಚರ್ಚೆ ಮಾಡಿ. ಅದನ್ನು ಬಿಟ್ಟು ನೇರವಾಗಿ ಆಪಾದನೆ ಮಾಡುವಂಥದ್ದು hit and run case ನಂತೆ. ಮಾನ್ಯ ಅಧ್ಯಕ್ಷರೆ, ದಯವಿಟ್ಟು ಇದಕ್ಕೆ allow ಮಾಡಬೇಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಚರ್ಚೆ ಮಾಡಲು ನಾವು ತಯಾರಾದ್ದೇವೆ. ನಿಯಮ 60 ಅಡಿಯಲ್ಲಿ ಚರ್ಚೆ ಮಾಡಲು we have every right. ಈ ಹಿಂದೆ ಆಗಿರುವ ಅನೇಕ ನಿದರ್ಶನಗಳನ್ನು ನಾನು ನಿಮಗೆ ಹೇಳಿದ್ದೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಮುಖ್ಯಮಂತ್ರಿಗಳ ಹೆಸರನ್ನು ಹೇಳಿದ್ದಾರೆ. ಅದನ್ನು ಕಡತದಿಂದ ತೆಗೆಯಬೇಕು.

(ಗೊಂದಲ)

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುವುದೇನೆಂದರೆ, ತಾವು ಯಾವುದರ ಬಗ್ಗೆ ಮಾತನಾಡುತ್ತೀರಿ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಿ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ: 24.4.2000 ಇಸವಿಯಲ್ಲಿ ಕುಡಿಯುವ ನೀರಿನ ಬಗ್ಗೆ ನಿಯಮ 60ರ ಅಡಿಯಲ್ಲಿ ಈ ಸದನದಲ್ಲಿ ಚರ್ಚಿಸಲಾಯಿತು.

ಅಧ್ಯಕ್ಷರು: ಅದು ಸರಿ.

(ಗೊಂದಲ)

ಶ್ರೀ ಸಿದ್ದುಸವದಿ: ಅವರು ನಿಯಮಬಾಹಿರವಾಗಿ ಮಾತನಾಡುತ್ತಿದ್ದಾರೆ. ಅದಕ್ಕೆ ಅವಕಾಶ ಕೊಡಬಾರದು.

(ಗೊಂದಲ)

ಶ್ರೀ ಸಿದ್ದರಾಮಯ್ಯ: ದಯಮಾಡಿ ಇದನ್ನು reconsider ಮಾಡಿಕೊಡಬೇಕು. ಇದರ ಬಗ್ಗೆ ತಮ್ಮ ಕೊಠಡಿಗೆ ಬಂದು ಮನವಿ ಮಾಡಿದೆವು,

ಪುನ ಇಲ್ಲಿ ಬಂದು ಮನವಿ ಮಾಡಿದೆವು. ಆದರೂ ಏಕೋ ನಿಮ್ಮ ಮನಸ್ಸು ಒಪ್ಪಲಿಲ್ಲ. ತಾವಾದರೂ ನಮಗೆ ಸಹಕಾರ ಕೊಡುತ್ತೀರಿ ಎಂದಿದ್ದೆವು. ಅವರಿಗೇನೋ ಮಾನಮರ್ಯಾದೆ ಇಲ್ಲ. ಲೋಕಾಯುಕ್ತರು ಏಕೆ ರಾಜೀನಾಮೆ ಕೊಟ್ಟರು ಎಂಬುದನ್ನು ಈ ರಾಜ್ಯದ ಜನತೆಗೆ ತಿಳಿಸತಕ್ಕಂಥ ದೃಷ್ಟಿಯಿಂದ, ಸರ್ಕಾರ ಹೋದರೂ ಪರವಾಗಿಲ್ಲ, ಜನರ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಈ ಸದನದಲ್ಲಿ ಒಳ್ಳೆಯ ಸಂಪ್ರದಾಯ ಹಾಕಿಕೊಂಡು ಬಂದಿರುವ ಕಾರಣಕ್ಕೋಸ್ಕರ ಇದರ ಬಗ್ಗೆ ಚರ್ಚೆ ಮಾಡಬೇಕು ಎಂಬ ದೃಷ್ಟಿಯಿಂದ.

(ಗೊಂದಲ)

ಶ್ರೀ ಸಿದ್ದುಸವದಿ: ನಿಯಮ ಬಾಹಿರವಾಗಿ ಸದನದ ಅಮೂಲ್ಯ ಸಮಯವನ್ನು ಕಾಂಗ್ರೆಸ್‌ನವರು ಹಾಳು ಮಾಡುತ್ತಿದ್ದಾರೆ. ರಾಜ್ಯದ ಜನತೆಗೆ ದ್ರೋಹ ಮಾಡುತ್ತಿದ್ದಾರೆ. ಅಧ್ಯಕ್ಷರು ಅದಕ್ಕೆ ಅವಕಾಶ ಕೊಡಬಾರದು.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಿಯಮ 60 ಮತ್ತು 69 ರಲ್ಲಿ ಏನೇನಿದೆಯೆಂದು ಕೂಡ ನಾವು ಹೇಳಿದ್ದೇವೆ. ಸದನವನ್ನು ತಪ್ಪುದಾರಿಗೆ ಎಳೆಯಲು ನಾವು ತಯಾರಾಗಿಲ್ಲ. ನಾವೂ ಚರ್ಚೆಗೆ ತಯಾರಾಗಿದ್ದೇವೆ. ಇವತ್ತು ಲೋಕಾಯುಕ್ತರು ಏಕೆ ರಾಜೀನಾಮೆ ಕೊಟ್ಟರು ಎಂಬ ಸಂದೇಶ ರಾಜ್ಯದ ಜನರಿಗೆ ಹೋಗಬೇಕು. ಬಿ.ಜೆ.ಪಿ.ಯ ಭ್ರಷ್ಟತೆಯನ್ನು ಬಹಿರಂಗಪಡಿಸುವ ಉದ್ದೇಶದಿಂದ ತಮ್ಮ ಆದೇಶವನ್ನು ನಾವು ಒಪ್ಪಿಕೊಳ್ಳುತ್ತಿದ್ದೇವೆ. ತಾವು ಏನು ನಿಯಮ 69ರ ಅಡಿಯಲ್ಲಿ ಚರ್ಚೆಗೆ ಆದೇಶಿಸಿದ್ದೀರಿ ಅದನ್ನು ಒಪ್ಪಿಕೊಳ್ಳುತ್ತೇವೆ. ತಮ್ಮ ಆದೇಶವನ್ನು ನಾವು ಪಾಲಿಸುತ್ತೇವೆ. ನಮ್ಮ ಮನವಿಯನ್ನು ತಾವು ಒಪ್ಪದಿದ್ದರೂ ತಮ್ಮ ಆದೇಶವನ್ನು ನಾವು ಪಾಲಿಸುತ್ತೇವೆ. ಆದ್ದರಿಂದ ದಯಮಾಡಿ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡಲು ನಮಗೆ ಈಗಲೇ ಅವಕಾಶ ಕಲ್ಪಿಸಿಕೊಡಿ.

ಅಧ್ಯಕ್ಷರು: ಪ್ರಶ್ನೋತ್ತರ ಆದಮೇಲೆ ಚರ್ಚೆಯನ್ನು ತೆಗೆದುಕೊಳ್ಳೋಣ.

(ಕಾಂಗ್ರೆಸ್ ಪಕ್ಷದ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು ಇದಕ್ಕೆ ಕುಮ್ಮಕ್ಕು ಕೊಟ್ಟಿದ್ದಾರೆ, ಇದಕ್ಕೆಲ್ಲಾ ಅವರೇ ಕಾರಣ ಎನ್ನತಕ್ಕ ರೀತಿಯಲ್ಲಿ ಹೇಳಿದ್ದಾರೆ. ಅದು ಕಡತದಿಂದ ತೆಗೆದು ಹಾಕಬೇಕು. ಅವರು ನೇರವಾಗಿ ಮುಖ್ಯಮಂತ್ರಿಯವರ ಹೆಸರನ್ನು ಹೇಳಿದ್ದೀರಿ.

ಶ್ರೀ ಸಿದ್ದರಾಮಯ್ಯ: ಹಾಗಾದರೆ ನೀವು ಜವಾಬ್ದಾರರಾ?

ಶ್ರೀ ಜಗದೀಶ್ ಶೆಟ್ಟರ್: ಅದನ್ನು ಕಡತದಿಂದ ತೆಗೆಯಬೇಕು.

ಶ್ರೀ ಹೆಚ್ ಡಿ ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾವೂ ಸಹ ನಿಯಮ 60ರ ಅಡಿಯಲ್ಲಿ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆವು. ಅದನ್ನು ತಾವು ನಿಯಮ 69ಕ್ಕೆ ಪರಿವರ್ತನೆ ಮಾಡಿರುವುದನ್ನು ಸ್ವಾಗತ ಮಾಡುತ್ತಿದ್ದೇವೆ. ನಾವು ಕೊಟ್ಟಿರುವ ಉದ್ದೇಶದ ಬಗ್ಗೆಯೂ ತಮಗೆ ಮನವರಿಕೆ ಮಾಡಬೇಕಾಗುತ್ತದೆ. ಇದು ಗಂಭೀರವಾದ ಆಪಾದನೆ ಆಗಿರುವುದರಿಂದ, ಮುಖ್ಯಮಂತ್ರಿಗಳೇ 2500 ಕೋಟಿಯಲ್ಲಿ ಭಾಗಿಯಾಗಿರುವುದರಿಂದ ನಿಯಮ 60ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಡಬೇಕೆಂದು ನಿಮ್ಮನ್ನು ಮನವಿ ಮಾಡಿದ್ದೆವು. ಆದರೆ, ತಾವು ನಿಯಮ 69ರಲ್ಲಿ ಅವಕಾಶ ಕೊಟ್ಟಿದ್ದೀರಿ. ಸಭಾನಾಯಕರಾದ ಮುಖ್ಯಮಂತ್ರಿಗಳೇ ಇದರ ಬಗ್ಗೆ ಎರಡು, ಮೂರು ದಿವಸವಾದರೂ ಚರ್ಚೆ ಮಾಡೋಣ ಎಂದು ಹೇಳಿದ್ದಾರೆ. ಗಣಿಗಾರಿಕೆಯಲ್ಲಿ 2001 ರಿಂದ ಇದುವರೆಗೆ ಏನೇನು ನಡೆದಿದೆ ಎಂಬ ಬಗ್ಗೆ ಪೂರ್ಣವಾಗಿ ಚರ್ಚೆ ಮಾಡಲು ಅವಕಾಶ ಕೊಡುತ್ತೇವೆಂದು ದಿಟ್ಟ ನಿಲುವನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ ಒಂದು ಎರಡು ದಿವಸವಲ್ಲ, ಎರಡು ಮೂರು ದಿವಸ ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕು. ಏಕೆಂದರೆ, ಇದು ನೇರವಾಗಿ ಮಾನ್ಯ ಮುಖ್ಯಮಂತ್ರಿಗಳ ಖಾತೆಯಾಗಿದೆ. ಪರಿಸರ, ಅರಣ್ಯ, ಹಣಕಾಸು ಇಲಾಖೆ ಇರಬಹುದು. ಅವರ ಮಂತ್ರಿ ಮಂಡಲದ ಸದಸ್ಯರೇ ಪತ್ತವನ್ನು ಬರೆದು ಅಧಿಕಾರಿಗಳ ಸಭೆಯನ್ನು ಒಂದು ಹೋಟೆಲ್‌ನಲ್ಲಿ ಕರೆದಿದ್ದಾರೆ. ಡಿ.ಸಿ. ಕಚೇರಿಯಲ್ಲಿ ಕರೆದಿಲ್ಲ. ಯಾರು ಗಣಿ ಮಾಫಿಯ 250 ಕೋಟಿ ನುಂಗಿದ್ದರೋ ಅವರನ್ನೂ ಸೇರಿಸಿ ಒಂದು

ಹೋಟೆಲ್‌ನಲ್ಲಿ ಸಭೆಯನ್ನು ಕರೆದಿದ್ದಾರೆ. ಮುಖ್ಯಮಂತ್ರಿಗಳೂ ರಾಜೀನಾಮೆ ಕೊಡಬೇಕಾಗುತ್ತದೆ. ಇವರುಗಳೂ ರಾಜೀನಾಮೆ ಕೊಡಬೇಕಾಗುತ್ತದೆ. ಚರ್ಚೆಯಲ್ಲಿ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಮಂಡಿಸುತ್ತೇವೆ. ಅದಕ್ಕೆ ತಾವು ಅವಕಾಶ ಕೊಡಬೇಕು. ಆಡಳಿತ ಪಕ್ಷದ ಸದಸ್ಯರು ಸ್ವಲ್ಪ ಗಂಭೀರವಾಗಿ ಕುಳಿತುಕೊಳ್ಳಲು ತಾವು ಮನವಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಜೆ.ಡಿ.ಎಸ್. ಪಕ್ಷದ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)

2. ಪ್ರಶ್ನೋತ್ತರ:

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ನಿಗಮ–ಬ್ಯಾಂಕ್ ಲಿಂಕ್ ಸಾಲ ಯೋಜನೆಯಲ್ಲಿ ಪ್ರಗತಿ ಕುಂಠಿತವಾಗಿರುವುದು

46(144) ಶ್ರೀ ಮಂಜುನಾಥ ಹೆಚ್ ಪಿ:(ಹುಣಸೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಸ್ವಾಮ್ಯತೆಯ ನಿಗಮಗಳಾದ ಡಿ.ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಹಾಗೂ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ಮೈಸೂರು ಜಿಲ್ಲೆಗೆ ತಾಲ್ಲೂಕುವಾರು ವಿವಿಧ ಸಾಲ ಸೌಲಭ್ಯಗಳಡಿ (ಸ್ವಯಂ ಉದ್ಯೋಗ, ಐ.ಎಸ್.ಬಿ. ಯೋಜನೆ ಇತ್ಯಾದಿ) ನಿಗದಿಪಡಿಸಿದ ಗುರಿ ಎಷ್ಟು ಹಾಗೂ ಸಾಧಿಸಿದ ಪ್ರಗತಿಯ ಪೂರ್ಣ ವಿವರ ನೀಡುವುದು:

ಆ) 2009–10ನೇ ಸಾಲಿನ ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ವಿವಿಧ ಸಾಲ ಯೋಜನೆಯಡಿಯಲ್ಲಿ ಸಹಾಯಧನ ಮಂಜೂರು ಆಗಿಲ್ಲದಿರುವುದು ನಿಜವೇ; ಹಾಗಿದ್ದಲ್ಲಿ, ಕಾರಣಗಳೇನು;

ಇ) ಮೇಲ್ಕಂಡ ನಿಗಮಗಳ ವಿವಿಧ ಯೋಜನೆಗಳಡಿ ಬ್ಯಾಂಕ್ ಲಿಂಕ್ ಆಗಿರುವಂತ ಸಾಲಗಳನ್ನು ಆಯ್ಕೆಗೊಂಡಂತಹ ಫಲಾನುಭವಿಗಳಿಗೆ ಬ್ಯಾಂಕ್